ಹೇಳಿದ್ದಾರಲ್ಲಾ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ಆಗಸ್ಟ್ 15ಕ್ಕೆ ನಮ್ಮ ಜಿಲ್ಲೆ ಉದ್ಘಾಟನೆಯಾಗಿದೆ. ಅಕ್ಟೋಬರ್ 25ಕ್ಕೆ ನಮ್ಮ ಜಿಲ್ಲಾಧಿಕಾರಿಗಳು ರಜೆ ಹೋದವರು ಮತ್ತೆ ಬರಲೇ ಇಲ್ಲ. ನಮ್ಮಲ್ಲಿ ಜಿಲ್ಲಾಧಿಕಾರಿಗಳಿಲ್ಲ. ಜಿಲ್ಲಾಧಿಕಾರಿಗಳ ಕಛೇರಿ ಸ್ಥಗಿತ ಆಗಿದೆ. ಹೊಸ ಜಿಲ್ಲಾಧಿಕಾರಿಗಳ ನೇಮಕಾತಿ ಯಾವಾಗ ಮಾಡುತ್ತೀರಿ?

ಅಧ್ಯಕ್ಷರು: ಕಳುಹಿಸಿಕೊಡೋಣ ಬೇರೆ ಜಿಲ್ಲಾಧಿಕಾರಿಗಳನ್ನು. ಕಳುಹಿಸಿಕೊಡಿ ಬಚ್ಚೇಗೌಡರೇ. ಅವರು ಪವರ್‌ಫುಲ್ ಮಿನಿಸ್ಟರ್. ಅವರು ಅರೇಂಜ್ ಮಾಡುತ್ತಾರೆ.

ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟಕುಸಿತ

8 (32)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ತೀರಾ ಕುಸಿದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ. ಬಂದಿದ್ದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ. ಹೌದು.

ಆ. ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಪ್ರಯೋಗಾತ್ಮಕವಾಗಿ ಕೃತಕ ಅಂತರ್ಜಲ ಮರುಪೂರೈಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈಗಾಗಲೇ ಅಂತಹ ರಚನೆಗಳನ್ನು ಕೋಲಾರ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ನಿರ್ಮಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿ ಅಂತರ್ಜಲ ಕೃತಕ ಮರುಪೂರೈಕೆಯ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯವು ಪ್ರಗತಿಯಲ್ಲಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಕೃತಕ ಮರುಪೂರ್ಯೆಕೆ ರಚನೆಗಳ ಕುರಿತು ತಾಲ್ಲೂಕುವಾರು ವಿವರ

			ಈ ಕಾಯಕ್ರಮಕ್ಕಾಗಿ ವೆಚ್ಚ ಮಾಡಲಾದ ಮೊತ್ತ
ಮಾಲೂರು ತಾಲ್ಲೂಕು	ದಿನ್ನಹಳ್ಳಿ	ಕೆಲಸ ಮುಗಿದಿದೆ	ರೂ. 1,35,000.00
-''-	ದೊಡ್ಡಕಲ್ಲಹಳ್ಳಿ	-''-	ರೂ. 75,000.00
-''-	ಚಿಕ್ಕಕಲ್ಲಹಳ್ಳಿ	-''-	ರೂ. 90,000.00
ಕೋಲಾರ ತಾಲ್ಲೂಕು	ವಡೇಹಳ್ಳಿ	-''-	ರೂ. 2,00,000.00
-''-	ಮೂರಂಡಹಳ್ಳಿ	-''-	ರೂ. 2,00,000.00
		ಒಟ್ಟು	ರೂ. 7,00,000.00

			ಪ್ರಸ್ತುತ ಸಾಲಿನಲ್ಲಿ ಖರ್ಚು ಮಾಡಲಾಗುತ್ತಿರುವ ಮೊತ್ತ
ಕೋಲಾರ ತಾಲ್ಲೂಕು ಗಾಜಲದಿನ್ನೆ		ಪ್ರಗತಿಯಲ್ಲಿದೆ	ರೂ. 2,60,000.00
ಚಿಕ್ಕಬಳ್ಳಾಪುರ ತಾಲ್ಲೂಕು ಸುಲ್ತಾನಪುರ		-''-	ರೂ. 75,000.00
-''-	ಅಗಲಕುರ್ಕಿ	-''-	ರೂ. 2,25,000.00
		ಒಟ್ಟು	ರೂ. 5,60,000.00

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನನಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅಂತರ್ಜಲವನ್ನು ಹೆಚ್ಚಿಸುವುದಕ್ಕಾಗಿ ಪ್ರಯೋಗಾತ್ಮಕವಾಗಿ ಮರುಪೂರ್ಯೆಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂದು ಹೇಳಿದ್ದೀರಿ. ಯಾವರೀತಿಯಾದ ರಚನೆಗಳ ಬಗ್ಗೆ ನೀವು ಕ್ರಮ ಕೈಗೊಂಡಿದ್ದೀರಿ? ಮತ್ತೆ ಕೆರೆಗಳಲ್ಲಿ ಹೂಳು ಎತ್ತತಕ್ಕ ಬಗ್ಗೆ ಕಾರ್ಯಕ್ರಮಗಳನ್ನು ಏನಾದರೂ ಹಾಕಿದ್ದೀರಾ? ಎಷ್ಟು ಚೆಕ್ ಡ್ಯಾಮ್‌ಗಳನ್ನು ಇಡೀ ಜಿಲ್ಲೆಯಲ್ಲಿ ರಚನೆ ಮಾಡಿದ್ದೀರಿ? ಎಷ್ಟು ಪಿಕಪ್‌ಗಳನ್ನು ಮಾಡಿದ್ದೀರಿ? ಬದುಗಳನ್ನು ಎತ್ತರ ಮಾಡತಕ್ಕ ಕಾರ್ಯಕ್ರಮಗಳನ್ನು ಏನಾದರೂ ತೆಗೆದುಕೊಂಡಿದ್ದೀರಾ? ಎರಡು ತಾಲ್ಲೂಕುಗಳನ್ನು ಮಾತ್ರ ಪ್ರಯೋಗಾತ್ಮಕವಾಗಿ ಮಾಡಿದ್ದೇವೆ ಎಂದು ನೀವು ಉತ್ತರದಲ್ಲಿ

ಕೊಟ್ಟಿದ್ದೀರಿ. ಇಡೀ ಕೋಲಾರ ಜಿಲ್ಲೆಯಲ್ಲಿರತಕ್ಕ 11 ತಾಲ್ಲೂಕುಗಳಲ್ಲೂ ಅಂತರ್ಜಲದ ಬಗ್ಗೆ ಒಂದೇ ಪರಿಸ್ಥಿತಿ ಇದೆ. ಆದ್ದರಿಂದ ಇಡೀ ಜಿಲ್ಲೆಗೆ ಸಮಗ್ರವಾದಂಥ ಕಾರ್ಯಕ್ರಮವನ್ನು ಹಾಕಲಿಕ್ಕೆ ನಾನು ಕೇಳಿದಂಥ ಆ ಎಲ್ಲಾ ಅಂಶಗಳಲ್ಲಿ ಯಾವಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು.

ಅಧ್ಯಕ್ಷರು: ತಿಪ್ಪೇಸ್ವಾಮಿಯವರೆ, ಹೀಗೆ ಮಾಡೋಣ. ಬೈರೇಗೌಡರು ಈ ಸಬ್ಜೆಕ್ಟ್‌ಗೆ ಫೆಮಿಲಿಯರ್ ಇದ್ದಾರೆ. ನಮಗೆ ಸದನಕ್ಕೆ ಅನುಕೂಲ ಆಗಬೇಕು. ಆದ್ದರಿಂದ ಅವರೇ ಉತ್ತರ ಹೇಳಲಿ. ಎಲ್ಲಾ ಕೆಲಸದ ಜೊತೆ ಅವರು ಫೆಮಿಲಿಯರ್ ಇದ್ದಾರೆ. ಮೈನ್ಸ್ ಅಂಡ್ ಜಿಯಾಲಜಿಯವರು ನಿಮಗೆ ಅಸಿಸ್ಟ್ ಮಾಡಬೇಕಾಗಿತ್ತು. ಬೈರೇಗೌಡರೇ, ನೀವು ಉತ್ತರ ಕೋಡಿ.

ಶ್ರೀ ಸಿ.ಬೈರೇಗೌಡ: ನಮ್ಮ ಇಲಾಖೆಯಲ್ಲಿ ಭೂಸಾರ ಮತ್ತು ನೀರಿನ ಸಂರಕ್ಷಣೆ ಕಾರ್ಯಕ್ರಮಗಳನ್ನು...

ಅಧ್ಯಕ್ಷರು: ಡೀಸಿಲ್ಟಿಂಗ್ ಪ್ರೋಗ್ರಾಂ ಉಳಿದಿದ್ದೆಲ್ಲಕ್ಕೂ ತಾವು ಹೆಚ್ಚು ಒತ್ತು ಕೊಟ್ಟು ಗಮನ ಹರಿಸಿದ್ದೀರಿ. ಆದ್ದರಿಂದ ನೀಯವೇ ಎಕ್ಸ್‌ಪ್ಲೈನ್ ಮಾಡಿ.

ಶ್ರೀ ಸಿ.ಬೈರೇಗೌಡ: ಅಧ್ಯಕ್ಷರೆ, ಪ್ರಯೋಗಾರ್ಥವಾಗಿ ಈ ಡಿಸಿಲ್ಟಿಂಗ್ ಕಾರ್ಯಕ್ರಮ ಮಾಡಿದೆ. ಇದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ. ತಮಗೆ ಮತ್ತು ಅನೇಕ ಸದಸ್ಯರಿಗೆ ಗೊತ್ತಿದೆ ಇದು ಹೆಚ್ಚು ಖರ್ಚಾಗತಕ್ಕ ಬಾಬ್ತು. ಅದಕ್ಕೋಸ್ಕರ ರೈತರ ಸಹಕಾರದೊಂದಿಗೆ ಎರಡು ಕೆರೆಗಳ ಹೂಳು ಎತ್ತತಕ್ಕ ಕಾರ್ಯಕ್ರಮವನ್ನು ಪ್ರಯೋಗಾರ್ಥವಾಗಿ ತೆಗೆದುಕೊಂಡಿದ್ದೇವೆ. ಬಹಳ ಚೆನ್ನಾಗಿ ಕೆಲಸ ಆಗಿದೆ. ರೈತರೂ ಕೂಡ ಮುಂದೆ ಬಂದು ಹೂಳು ಸಾಗಾಣಿಕೆ ಮಾಡತಕ್ಕದ್ದನ್ನು ಮಾಡಿದ್ದಾರೆ. ಸರ್ಕಾರದಿಂದ ತುಂಬತಕ್ಕ ಯಂತ್ರವನ್ನು ಮಾತ್ರ ಒದಗಿಸಿ ಅವರು ತರತಕ್ಕ ವಾಹನಗಳಿಗೆ ಮಣ್ಣನ್ನು ತುಂಬತಕ್ಕ ಕೆಲಸವನ್ನು ಮಾಡಿದ್ದೇವೆ. ಅದು ಹೆಚ್ಚು ಯಶಸ್ವಿಯಾಗಿದೆ. ಇದನ್ನು ವ್ಯಾಪಕವಾಗಿ ಜಿಲ್ಲೆಯಾದ್ಯಂತ ತೆಗೆದುಕೊಳ್ಳತಕ್ಕ ಯೋಚನೆ ಕೂಡ ಇದೆ. ಜೊತೆಗೆ ನಿನ್ನೆ ಮೊನ್ನೆಯಿಂದ ಜಿಲ್ಲೆಯ ಅಧಿಕಾರಿಗಳಲ್ಲಿ ನಾನು ಸಂಪರ್ಕ ಇಟ್ಟುಕೊಂಡಿದ್ದೇನೆ. ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟಿರತಕ್ಕ ಕೆಲವು ಬಾಬುಗಳಲ್ಲಿ ಉಳಿತಾಯವಾಗುವ ಸಂಭವ ಇದೆ. ಆ ಉಳಿತಾಯವಾಗುವ ಹಣವನ್ನು ಮೊದಲನೆಯದಾಗಿ ಕುಡಿಯುವ ನೀರಿಗೆ ಆದ್ಯತೆ ಕೊಡುತ್ತೇವೆ. ಹೊಸದಾಗಿ ಕೊಳವೆಬಾವಿ ಮಾಡತಕ್ಕದ್ದು ಬೇರೆ ವ್ಯವಸ್ಥೆಗಳನ್ನು ಮಾಡತಕ್ಕದ್ದು ಮಾಡುತ್ತೇವೆ. ಉಳಿದಂಥ ಹಣವನ್ನು ಕೆರೆಗಳ ಹೂಳೆತ್ತುವುದಕ್ಕೆ ಉಪಯೋಗಿಸುತ್ತೇವೆ. ಕನಿಷ್ಠ ಪ್ರತಿ ತಾಲ್ಲೂಕಿನಲ್ಲಿ ಒಂದನ್ನಾದರೂ ಕೆರೆ ಹೂಳೆತ್ತುವುದಕ್ಕೆ ಪ್ರಯತ್ನ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಇದು ತಕ್ಷಣಕ್ಕೆ ಆಗಿರತಕ್ಕದ್ದು. ಈ ಸಮಸ್ಯೆ ಹೆಚ್ಚು ಬೃಹದಾಕಾರವಾಗಿರುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂಬ ಆಲೋಚನೆ ಇದೆ ಸರ್ಕಾರಕ್ಕೆ ಎಂಬುದನ್ನು ತಮ್ಮ ಮೂಲಕ

ಸದನದ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ:

ಅಧ್ಯಕ್ಷರು: ರೆಡ್ಡಿಯವರೆ, ಒಂದು ಸಲಹೆ ಇದೆ. ಎನ್‌ಕ್ರೋಚ್‌ಮೆಂಟ್ ಆಫ್ ಟ್ಯಾಂಕ್‌ಬೆಡ್, ರೀಛಾರ್ಜಿಂಗ್, ಡೀಸಿಲ್ಟಿಂಗ್ ಇದೆಲ್ಲಾ ಬಹಳ ದೊಡ್ಡ ವಿಷಯ. ನಮ್ಮ ಮೈದಾನ ಜಿಲ್ಲೆಗಳವರಿಗೆ ಬಹಳ ತೀವ್ರವಾಗಿ ಕಾಡುತ್ತಿರುವ ಸಮಸ್ಯೆ ಇದು. ಇದನ್ನು ಹೆಚ್ಚು ಇಲ್ಲಿ ಈಗ ಡಿಸ್‌ಕಸ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಇದು ಪ್ರಶ್ನೋತ್ತರ ವೇಳೆ. We will not be able to discuss it in Question Hour. I will earmark some time exaclusively for this subject. We will take it up later. Kindly cooperate.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆಗಬಹುದು.

ವರಾಹಿ ಜಲವಿದ್ಯುತ್ ಯೋಜನೆಯಿಂದ ತೊಂದರೆಗೊಳಗಾದ ಕುಟುಂಬಗಳಿಗೆ ಉದ್ಯೋಗ

9 (43)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ವರಾಹಿ ಜಲ ವಿದ್ಯುತ್ ಯೋಜನೆಯಡಿಯಲ್ಲಿ ಮನೆ ಜಮೀನು ಕಳೆದುಕೊಂಡ ಒಟ್ಟು ಕುಟುಂಬಗಳೆಷ್ಟು?

ಆ) ಹೀಗೆ ಮನೆ ಜಮೀನು ಕಳೆದುಕೊಂಡ ಕುಟುಂಬಗಳಿಗೆ ವಿದ್ಯುತ್ ನಿಗಮದಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬುವಾಗ ಕೆಲಸ ಕೊಡಬೇಕೆಂಬ ನಿಯಮ ಇದೆಯೆ?

ಇ) ಈ ನಿಯಮದ ಪ್ರಕಾರ ಡಿಸೆಂಬರ್ 31, 1997ರವರೆಗೆ ಎಷ್ಟು ಕುಟುಂಬಕ್ಕೆ ಉದ್ಯೋಗಾವಕಾಶ ಲಭ್ಯವಾಗಿದೆ? (ವಿವರ ನೀಡುವುದು)

ಈ) ಉಳಿದ ಕುಟುಂಬಗಳ ಸದಸ್ಯರಿಗೆ ಯಾವಾಗ ಉದ್ಯೋಗ ನೀಡಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು)

ಅ) 1775 ಕುಟುಂಬಗಳು (ಚಕ್ಕಾ ಮತ್ತು ವರಾಹಿ ಸೇರಿ)

ಆ) ಹುದ್ದೆಗಳು ಖಾಲಿ ಇದ್ದಾಗ ಜಮೀನು ಕಳೆದುಕೊಂಡು ಕುಟುಂಬಗಳ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯದ ಮೇಲೆ ಕೆಲಸವನ್ನು ಕೊಡಲು ಅವಕಾಶವಿದೆ.